



ತಿಂಗಳಿನವರೆಗೂ ಹೂವುಗಳು ಮೇಲೆ ಮೇಲೆ ಅರಳುತ್ತಿರುತ್ತವೆ, ಕಾಂಡದ ನಡುವೆಯೂ ಗಿಡಗಳು ಬೆಳೆದುಕೊಂಡು ಗುಂಪಾಗಿ ಬಿಡುತ್ತದೆ. ಹೂವು ಬಿಡುವ ಎರಡು ಸಸ್ಯಗಳ ದೊಡ್ಡ ಗುಂಪಿನಲ್ಲಿ ಇದೂ ಒಂದು. ಬೀಜ ಬಿಡುವ ಸಸ್ಯಗಳಲ್ಲಿ ಆರ್ಕಿಡ್‌ಗಳ ಪಾಲು ಶೇಕಡ 6 ರಿಂದ 11ರಷ್ಟು. ಆರ್ಕಿಡೇಸಿ ಕುಟುಂಬದಲ್ಲಿ ಬರುವ ಈ ಸಸ್ಯಗಳಲ್ಲಿ ಡೆಂಡ್ರೋಬಿಯಂ, ಬಲ್ಬೊಫಿಲ್ಲಂ, ಎಪಿಡೆಂಡ್ರಮ್ ಮತ್ತು ಪ್ಲುರೋಥಾಲಿಸ್ ಎಂಬ ನಾಲ್ಕು ವರ್ಗಗಳು. ಇವುಗಳಲ್ಲಿ ಒಟ್ಟು 5900 ಜಾತಿಯ ಸಸ್ಯಗಳು ಕಾಣುತ್ತವೆ.

ಭಾರತದಲ್ಲಿ ಸುಮಾರು 1300 ಪ್ರಭೇದಗಳು ಕಾಣಸಿಗುತ್ತವೆ. ಇವುಗಳಲ್ಲಿ ಬಹಳಷ್ಟು ಮರಗಳ ಮೇಲೆ ಬೆಳೆದರೆ, ಇನ್ನು ಕೆಲವು ನೆಲದ ಮೇಲೆ ಬೆಳೆಯುತ್ತವೆ. ಕೇವಲ ಆಶ್ರಯಕ್ಕಾಗಿ ಇತರ ಮರಗಳನ್ನು ಅವಲಂಬಿಸಿರುವ ಇವುಗಳಿಗೆ ನೀರಿಗಾಗಿ ವಾತಾವರಣದ ತೇವಾಂಶವನ್ನು ಹೀರಿಕೊಳ್ಳಲು ವಿಶಿಷ್ಟವಾದ ವ್ಯಾಲಮಿನ್ ಅಂಗಾಂಶವಿದೆ. ಇನ್ನು ಕಾರ್ಬನ್ ಡೈ ಆಕ್ಸೈಡ್ ಕೂಡ ಅಲ್ಲಿಂದಲೇ ಲಭ್ಯ. ನೆಲದಲ್ಲಿ ಬೆಳೆಯುವ ಕೆಲವು ಆರ್ಕಿಡ್‌ಗಳು ಈರುಳ್ಳಿ ಗೆಡ್ಡೆಯಂತೆ ಕಾಂಡವನ್ನು ಹೊಂದಿದ್ದು ನೀಳವಾದ ಎಲೆಗಳು ನೆಲಕ್ಕಿಂತ ಮೇಲೆ ಬೆಳೆಯುತ್ತವೆ. ಗೆಡ್ಡೆಯಿಂದಲೇ ನೀಳವಾಗಿ ಬೆಳೆಯುವ ತೊಟ್ಟಿಗೆ ಪುಷ್ಪಮಂಜರಿಗಳು ಆಕರ್ಷಕವಾಗಿರುತ್ತವೆ.

ಮರದ ಮೇಲೆಯೇ ಬೆಳೆಯುವ ಪರ್ಲ್ ಆರ್ಕಿಡ್‌ನದು ಮತ್ತೊಂದು ವೈಶಿಷ್ಟ್ಯ. ಇದಕ್ಕೂ ಚೌಕಾಕಾರದ ಗೆಡ್ಡೆಗಳಿದ್ದು ಶಂಖುವಿನಂತೆ





## ಅಂದ- ಅಲಂಕಾರ

ಅನನ್ಯ ಸೌಂದರ್ಯದಿಂದ ಮನಸೆಳೆಯುವ ಆರ್ಕಿಡ್ ಹೂವುಗಳು ಅಲಂಕಾರದ ಭಾಗವಾಗಿ ಹೆಚ್ಚು ಪ್ರಚಲಿತದಲ್ಲಿವೆ. ಗೃಹಾಲಂಕಾರ, ಸಭೆ–ಸಮಾರಂಭಗಳಲ್ಲಿ ಆಲಂಕಾರಿಕ ಹೂವಾಗಿ ಬಳಕೆಯಲ್ಲಿದೆ. ಅಂದಕ್ಕೆ ಮಾತ್ರವಲ್ಲದೆ ಆಹಾರ ಪದಾರ್ಥಗಳಲ್ಲಿನ ಫ್ಲೇವರಿಂಗ್ ಆಗಿ ಹಾಗೂ ಸುಗಂಧ ದ್ರವ್ಯಗಳಲ್ಲಿಯೂ ಆರ್ಕಿಡ್‌ಗಳನ್ನು ಉಪಯೋಗಿಸಲಾಗುತ್ತಿದೆ. ಅರೋಮಾ ಥೆರಪಿಯಲ್ಲಿ ಈ ಬೆಟ್ಟದ ಹೂವು ಪ್ರಧಾನವಾಗಿದೆ.

ಚೂಪಾಗಿರುತ್ತವೆ. ಪ್ರತಿ ವರ್ಷವೂ ಗೆಡ್ಡೆಗಳ ಸಂಖ್ಯೆ ಹೆಚ್ಚುತ್ತಾ ಹೋಗಿ ಗಿಡಗಳು ವೃದ್ಧಿಯಾಗುತ್ತವೆ. ಗೆಡ್ಡೆ ಮತ್ತು ಎಲೆಯ ಮಧ್ಯಭಾಗದಿಂದ ಒಂದು ಸಣ್ಣ ದಾರದಂತೆ ಬೆಳೆಯುವ ಹೂ ತೊಟ್ಟು ಕೆಳಗಡೆಗೆ ಇಳಿ ಬಿದ್ದಂತೆ ಬೆಳೆದು, ಅದರ ಎರಡು ಬದಿಯಲ್ಲಿ ಮುತ್ತಿನ ಮಣಿ ಪೋಣಿಸಿದಂತೆ ಹೂವುಗಳು ಬೆಳೆಯುತ್ತವೆ. ಇದರಲ್ಲಿ ತೂಗಾಡುವ ವಾಯುವಿಕ ಬೇರುಗಳು ಕಂಡುಬರುವುದಿಲ್ಲ.

ಕೆಲವಂತೂ ಬಹಳ ವಿಶಿಷ್ಟವಾಗಿ ಬೆಳೆಯುವ ಕೊಳೆತಿನಿ ಆರ್ಕಿಡ್. ಇವುಗಳಿಗೆ ಎಲೆಗಳಂತೂ ಕಾಣುವುದಿಲ್ಲ! ಹೂವಿನ ದಂಡೆ ನೆಲದಿಂದ ಮೇಲಕ್ಕೆ ಮುಕ್ಕಾಲು ಅಡಿಯಷ್ಟು ಬೆಳೆದು ಬಿಳಿ ಬಣ್ಣದ ಹೂ ಗೊಂಚಲು ಬಿಡುತ್ತದೆ. ಬಹಳ ಅಪರೂಪವಾದ, ನಶಿಸಿಹೋಗುವ ಹಂತವನ್ನು ತಲುಪಿರುವ ವಿರಳ ಆರ್ಕಿಡ್ ಎಂದರೆ ಅದುವೆ ವ್ಯಾಂಡ ವೈಟೀ ಪ್ರಭೇದ.

ಕೇವಲ ಕರ್ನಾಟಕ, ಕೇರಳ ಮತ್ತು ತಮಿಳುನಾಡಿನ ಪಶ್ಚಿಮ ಘಟ್ಟ ಮತ್ತು ಶ್ರೀಲಂಕಾದ ಕಾಡುಗಳಲ್ಲಿರುವ ಸ್ಥಳೀಯ ಸಸ್ಯ. ಇದು ವರ್ಷಕ್ಕೆ ಬಿಡುವುದು ಒಂದೇ ಒಂದು ಹೂವು. ಬಹಳ ಅಪರೂಪಕ್ಕೆ ಎರಡು. ಈ ಸಸ್ಯ ಅಳಿದುಹೋಗಿದೆ ಎಂದು ನಂಬಲಾಗಿತ್ತು. 1849ರಲ್ಲಿ ಮತ್ತೆ ಸಿಕ್ಕಿದ್ದು ಈ ಪ್ರಭೇದ ಉಳಿದಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಸಸ್ಯದ ಬೆಳವಣಿಗೆ ತುಂಬಾ ನಿಧಾನಗತಿಯದ್ದು. ಹೂವು ಹಸಿರು ಮಿಶ್ರಿತ ಕಡುಕಂದು ಬಣ್ಣ. ಎರಡು ದಳಗಳು ಮಾಮೂಲಿನಂತಿದ್ದು, ಮೂರನೆಯದು ಮಾತ್ರ ಬಿಳಿ ಬಣ್ಣವನ್ನು ಹೊಂದಿದೆ.

ಎಲ್ಲಾ ಆರ್ಕಿಡ್‌ಗಳು ಅಪರೂಪಕ್ಕೆ ಬೀಜೋತ್ಪತ್ತಿ ಮಾಡುತ್ತವೆ. ಬೀಜಗಳು ಅತ್ಯಂತ ಸಣ್ಣ ಗಾತ್ರದವಾಗಿದ್ದು ಗಾಳಿಯಲ್ಲಿ ತೂರಿಹೋಗುವಷ್ಟು ಹಗುರವಾಗಿರುತ್ತವೆ, ಇತರ ಮರಗಳಿಗೆ ಹರಡಿಕೊಳ್ಳುತ್ತವೆ. ಕೆಲವು ಹೂವಿನ ದಂಡದಿಂದ ಸಣ್ಣ ಸಣ್ಣ ಸಸ್ಯ ಬೆಳೆದರೆ, ಕೆಲವು ಬೇರಿನ ಭಾಗದಿಂದ ಮರಿಸಸ್ಯಗಳು ಬೆಳೆಯುತ್ತವೆ. ಇನ್ನು ಕೆಲವು ಪ್ರಭೇದಗಳನ್ನು ತಳೀಕರಣದ ಮೂಲಕ ಬೆಳೆಸಲಾಗುತ್ತಿದ್ದು, ದೊಡ್ಡ ಗಾತ್ರದ ಹೂವುಗಳನ್ನು ಬಿಡುತ್ತವೆ.

ಹೂವುಗಳು ಹಲವು ಬಣ್ಣಗಳಲ್ಲಿರುತ್ತವೆ. ಮೂರು ತಿಂಗಳಿನಂತೆ ಎರಡ್ಮೂರು ಬಾರಿ ಅರಳುತ್ತವೆ. ಆಲಂಕಾರಿಕ ಸಸ್ಯವಾಗಿ ಆಕರ್ಷಕ ಹೂವುಗಳನ್ನು ಬಿಡುವುದರಿಂದ ಇತ್ತೀಚೆಗೆ ತಳೀಕರಣದ ಸಸ್ಯಗಳು ಹೆಚ್ಚಿನ ಮನೆಯ ಹೊರಾಂಗಣ ಮತ್ತು ಬಾಲ್ಕನಿಯಲ್ಲಿ ಸ್ಥಾನ ಪಡೆದುಕೊಳ್ಳುತ್ತಿವೆ.